# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ: 10** **ತಿಂಗಳು: ಮಾರ್ಚ್** **ವಿಷಯ: ದ್ವಿತೀಯ ಭಾಷೆ–ಕನ್ನಡ**

**ಅಭ್ಯಾಸ ಹಾಳೆ: 01**

- **ಮಾದರಿಯಂತೆ ಗಾದೆಯನ್ನು ವಿಸ್ತರಿಸಿ ಬರೆಯಿರಿ.**

**ಕೈ ಕೆಸರಾದರೆ ಬಾಯಿ ಮೊಸರು**

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ. ಈ ಗಾದೆಯು ಕಷ್ಟಪಡದೇ ಸುಖ ಸಿಗುವುದಿಲ್ಲ ಎಂಬುದನ್ನು ಧ್ವನಿಪೂರ್ಣವಾಗಿ ಹೇಳುತ್ತದೆ.

ಕೈ ಕೆಸರಾಗುವುದು ದುಡಿಮೆಯನ್ನು ಸಂಕೇತಿಸಿದರೆ ಮೊಸರು ಎಂಬುದು ಅದರ ಪ್ರತಿಫಲವನ್ನು ಬಿಂಬಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೂ ಕಾಯಕ ಮಾಡುವ ಮೂಲಕ ಸಂಪಾದನೆ ಮಾಡಿ ಜೀವಿಸಬೇಕು. ಸೋಮಾರಿಗಳಾಗಿ ಏನೂ ಕೆಲಸ ಮಾಡದೆ ಬೇರೆಯವರನ್ನು ಅವಲಂಬಿಸಿ ಬದುಕುವುದು ಎಂದಿಗೂ ನೆಮ್ಮದಿಯನ್ನು ತಂದುಕೊಡಲಾರದು. ದುಡಿದು ತಿನ್ನುವುದರಲ್ಲಿ ಇರುವ ಸುಖ ಮತ್ತೊಂದಿಲ್ಲ ಎಂಬುದನ್ನು ಈ ಗಾದೆ ತಿಳಿಸುತ್ತದೆ. ಉದಾಹರಣೆಗೆ ರೈತನು ಹೊಲದಲ್ಲಿ ಶ್ರಮವಹಿಸಿ ದುಡಿದರೆ ಮಾತ್ರ ಅವನಿಗೆ ಬೆಳೆಯ ಮೂಲಕ ಅದರ ಪ್ರತಿಫಲ ಸಿಗುತ್ತದೆ

ಕೂತು ಉಂಡರೆ ಕುಡಿಕೆ ಹೊನ್ನು ಸಾಲದು ಎಂಬಂತೆ ನಾವು ದುಡಿಮೆಯಲ್ಲಿ ತೊಡಗಿಸಿಕೊಳ್ಳದೆ ಇದ್ದರೆ ಇದ್ದ ಆಸ್ತಿಯನ್ನು ಕಳೆದುಕೊಂಡು ಕಷ್ಟಪಡಬೇಕಾಗುತ್ತದೆ. ಹಾಗಾಗಿ ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತಿನಂತೆ ನಾವೆಲ್ಲರೂ ದುಡಿಮೆಯನ್ನು ನಂಬಿ ಬದುಕಿದರೆ ಜೀವನ ಪೂರ್ತಿ ಸುಖವಾಗಿ ಬಾಳಬಹುದು ಎಂಬುದನ್ನು ಈ ಗಾದೆ ತಿಳಿಸಿಕೊಡುತ್ತದೆ.

**ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ**

# ಅಭ್ಯಾಸ ಹಾಳೆ: 02

➢ **ಮಾದರಿಯಂತೆ ಕೊಟ್ಟಿರುವ ಮಾಹಿತಿಯನ್ನು ಬಳಸಿ ಕವಿ/ಲೇಖಕರ ಪರಿಚಯ ಮಾಡಿ**

**ರಮೇಶಗೌಡ ಮಲ್ಲನಗೌಡ ಕಲ್ಲನಗೌಡ:** ರಮೇಶಗೌಡ ಮಲ್ಲನಗೌಡ ಕಲ್ಲನಗೌಡರವರು ಧಾರವಾಡ ಜಿಲ್ಲೆಯ ನರಗುಂದ ತಾಲ್ಲೂಕು ಕಿತ್ತೂರು ಗ್ರಾಮದಲ್ಲಿ 1975 ರಲ್ಲಿ ಜನಿಸಿದರು. ಇವರು 'ಅಮೃತಕ್ಕೆ ಹಾರಿದ ಗರುಡ' ,'ರೂಪ ಬಯಲು' 'ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ 'ಅಮೃತಕ್ಕೆ ಹಾರಿದ ಗರುಡ' ಕಥಾ ಸಂಕಲನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ 'ರತ್ನಾಕರವರ್ಣಿ ಮುದ್ದಣ್ಣ ದತ್ತಿ ಪ್ರಶಸ್ತಿ' ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ವರ್ಷದ ಉತ್ತಮ ಕೃತಿ' ಪ್ರಶಸ್ತಿಗಳು ಲಭಿಸಿವೆ.

| ಕವಿ/ ಸಾಹಿತಿ | ಕಾಲ | ಸ್ಥಳ | ಕೃತಿಗಳು | | | ಪ್ರಶಸ್ತಿ/ಬಿರುದು |
|---|---|---|---|---|---|---|
| ಕುಮಾರವ್ಯಾಸ | 1430 | ಗದುಗಿನ ಕೋಳಿವಾಡ | ಕರ್ಣಾಟ ಭಾರತ ಕಥಾ ಮಂಜರಿ | ಐರಾವತ | | ರೂಪಕ ಸಾಮ್ರಾಜ್ಯ ಚಕ್ರವರ್ತಿ |
| ಕುವೆಂಪು | 1904 | ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿ | ಶ್ರೀ ರಾಮಾಯಣ ದರ್ಶನಂ | ಪಕ್ಷಿಕಾಶಿ, ಕಾನೂರು ಹೆಗ್ಗಡತಿ | ಮಲೆಗಳಲ್ಲಿ ಮಧುಮಗಳು | ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ |
| ಎಂ.ಗೋಪಾಲಕೃಷ್ಣ ಅಡಿಗ | 1918 | ಉಡುಪಿ ಜಿಲ್ಲೆಯ ಮೊಗೇರಿ | ಭಾವ ತರಂಗ | ಕಟ್ಟುವೆವು ನಾವು | ಭೂಮಿಗೀತ, ಚಂಡೆಮದ್ದಳೆ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ |
| ಅ.ರಾ.ಮಿತ್ರ | 1935 | ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು | ನಾನೇಕೆ ಕೊರೆಯುತ್ತೇನೆ | ಛಂದೋಮಿತ್ರ | ಆರತಕ್ಷತೆ ಮತ್ತು ಇತರ ಪ್ರಬಂಧಗಳು | ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ |
| ಸಿಪಿಕೆ | 1939 | ಮೈಸೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ | ತಾರಾ ಸುಖ | ಅನಂತ ಪೃಥ್ವೀ | ಕನ್ನಡ ಚತುರ್ಮುಖ | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಚುಟುಕು ರತ್ನ ಪ್ರಶಸ್ತಿ |
| ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ | 1951 | ಹಾವೇರಿ ಜಿಲ್ಲೆಯ ಹೆಡಿಯಾಲ | ಜೀವನ ದರ್ಶನ | ಕಾಯಕ ದಾಸೋಹ | ಅಂತರಂಗ ಬಹಿರಂಗ | ರಾಜ್ಯೋತ್ಸವ ಪ್ರಶಸ್ತಿ, ಪಾಲ್ ಹ್ಯಾರಿಸ್ ಪ್ರಶಸ್ತಿ |
| ಡಾ॥ ಗುರುರಾಜ ಕರ್ಜಗಿ | 1952 | ಹಾವೇರಿ ಜಿಲ್ಲೆಯ ಕರ್ಜಗಿ | ಕರುಣಾಳು ಬಾ ಬೆಳಕೆ | | | ರಾಜ್ಯೋತ್ಸವ ಪ್ರಶಸ್ತಿ |
| ಬಸವರಾಜ ಸಬರದ | 1954 | ಕೊಪ್ಪಳ ಜಿಲ್ಲೆಯ ಕುಕನೂರು | ನನ್ನವರ ಹಾಡು | ನೂರು ಹನಿಗಳು | ದನಿಯೆತ್ತಿ ಹಾಡೇನ | ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ |
| ಸುಕನ್ಯಾ ಮಾರುತಿ | 1956 | ಬಳ್ಳಾರಿ ಜಿಲ್ಲೆಯ ಕೊಟ್ಟೂರು | ನಾನೆಂಬ ಮಾಯೆ | ತಾಜಮಹಲಿನ ಹಾಡು | ಬಿಂಬದೊಳಗಣ ಮಾತು | ಅಂಬೇಡ್ಕರ್ ಪ್ರಶಸ್ತಿ |

## ಅಭ್ಯಾಸ ಹಾಳೆ: 03

**ಮಾದರಿಯಂತೆ ಅಲಂಕಾರವನ್ನು ಹೆಸರಿಸಿ, ಲಕ್ಷಣ ತಿಳಿಸಿ, ಸಮನ್ವಯಗೊಳಿಸಿ ಬರೆಯಿರಿ**

**ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ.**
**ಅಲಂಕಾರ : ಉಪಮಾಲಂಕಾರ**
**ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.**
ಉಪಮಾನ : ಚಂದ್ರ
ಉಪಮೇಯ : ಮಗುವಿನ ಮುಖ
ಉಪಮಾವಾಚಕ : ಅಂತೆ
ಸಮಾನಧರ್ಮ : ಮನೋಹರತೆ
ಸಮನ್ವಯ : ಇಲ್ಲಿ ಉಪಮೇಯವಾದ ಮಗುವಿನ ಮುಖವನ್ನು ಉಪಮಾನವಾದ ಚಂದ್ರನಿಗೆ ಹೋಲಿಸಿ ವರ್ಣಿಸಿದೆ. ಆದ್ದರಿಂದ ಇದು ಉಪಮಾಲಂಕಾರ.

---

**ಬನದ ಹೂಗಳು ಸಾವಿರಾರು ಮಳೆಬಿಲ್ಲಿನಂತೆ ಕಂಗೊಳಿಸುತ್ತಿದ್ದವು.**
**ಅಲಂಕಾರ :**
**ಲಕ್ಷಣ :**
ಉಪಮಾನ :
ಉಪಮೇಯ :
ಉಪಮಾವಾಚಕ :
ಸಮಾನಧರ್ಮ :
ಸಮನ್ವಯ :

---

**ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ.**
**ಅಲಂಕಾರ :**
**ಲಕ್ಷಣ :**
ಉಪಮಾನ :
ಉಪಮೇಯ :
ಉಪಮಾವಾಚಕ :
ಸಮಾನಧರ್ಮ :
ಸಮನ್ವಯ :

| |
|---|
| **ಸೀತೆಯ ಮುಖಕಮಲ ಅರಳಿತು**<br>**ಅಲಂಕಾರ : ರೂಪಕಾಲಂಕಾರ**<br>**ಲಕ್ಷಣ : ಉಪಮೇಯ ಮತ್ತು ಉಪಮಾನಗಳ ನಡುವೆ ಅಭೇದ ಸಂಬಂಧವನ್ನು ಸೂಚಿಸಿ ವರ್ಣಿಸುವುದೇ ರೂಪಕಾಲಂಕಾರ**<br>ಉಪಮಾನ : ಕಮಲ<br>ಉಪಮೇಯ : ಸೀತೆಯ ಮುಖ<br>ಸಮನ್ವಯ : ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ವರ್ಣಿಸಲಾಗಿದೆ. ಆದ್ದರಿಂದ ಇದು ರೂಪಕಾಲಂಕಾರ |
| **ಉತ್ತರಕುಮಾರನು ಕೌರವರ ಬಲಗಡಲನ್ನು ಕಂಡು ಅಂಜಿದನು.**<br>**ಅಲಂಕಾರ :**<br>**ಲಕ್ಷಣ :**<br>ಉಪಮಾನ :<br>ಉಪಮೇಯ :<br>ಸಮನ್ವಯ : |
| **ಕೌರವರ ಸೇನಾಸಾಗರ ಅಭೂತವಾಗಿತ್ತು.**<br>**ಅಲಂಕಾರ :**<br>**ಲಕ್ಷಣ :**<br>ಉಪಮಾನ :<br>ಉಪಮೇಯ :<br>ಸಮನ್ವಯ : |

**ಅಭ್ಯಾಸ ಹಾಳೆ: 04**

**ಮಾದರಿಯಂತೆ ಪದ್ಯದ ಸಾರಾಂಶ ಬರೆಯಿರಿ**

**ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು**
**ದೀಪದೆದುರಿಗೆ ತಿಮಿರ ಸರಿಯುವಂತೆ**
**ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು**
**ಕೂಗಾಡಿ, ಹಾರಾಡಿ ಫಲವದೇನು?**

ಪ್ರಸ್ತುತ ಪದ್ಯಭಾಗವನ್ನು 'ಸಿಪಿಕೆ'ರವರು ಬರೆದಿರುವ ಬೊಗಸೆ ಕವನ ಸಂಕಲನದಿಂದ ಆರಿಸಲಾದ ಸದ್ದು ಮಾಡದಿರು ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ. ಕವಿ 'ಸಿಪಿಕೆ'ರವರು ಸದ್ದು ಮಾಡದಿರು ಪದ್ಯದಲ್ಲಿ ನಾವು ಆಡಂಬರಕ್ಕೆ, ಪ್ರದರ್ಶನದ ಜೀವನಕ್ಕೆ ಮನಸೋಲುತ್ತಿದ್ದೇವೆ . ಅದರ ಬದಲು ಶಾಂತಿ, ಸಹನೆಯಿಂದ ನಮ್ಮ ಅಹಂಕಾರವನ್ನು ತ್ಯಜಿಸಿ ಬಾಳುವ ಮೂಲಕ ಜೀವನ ಸಾರ್ಥಕ ಪಡಿಸಿಕೊಳ್ಳಬೇಕು ಎಂಬುದನ್ನು ಸೊಗಸಾಗಿ ತಿಳಿಸಿಕೊಟ್ಟಿದ್ದಾರೆ. ಕರ್ಪೂರವು ತಟ್ಟೆಯಲ್ಲಿ ಕರಗಿ ಹೋಗುವಂತೆ, ದೀಪದ ಬೆಳಕಿಗೆ ಕತ್ತಲು ಮರೆಯಾಗುವಂತೆ ನಾವು ಸಹ ನಮ್ಮ ಬದುಕಿನ ಕರ್ತವ್ಯಗಳನ್ನು ಮೌನವಾಗಿ ಮಾಡಬೇಕು. ಕೂಗಾಡಿ ಹಾರಾಡುವುದರಿಂದ ಯಾವುದೇ ಪ್ರಯೋಜನವಾಗದು. ಬದಲಿಗೆ ಪ್ರೀತಿ ವಿಶ್ವಾಸಗಳಿಂದ ಬದುಕನ್ನು ಸಾಗಿಸಲು ಸಹನೆ, ಶಾಂತಿಯನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದು ಕವಿ ಈ ಪದ್ಯಭಾಗದಲ್ಲಿ ಚಿತ್ರಿಸಿದ್ದಾರೆ.

ಕೋಪ ತಾಪಗಳಿಂದ ನಮ್ಮ ಮನಸ್ಥಿತಿ ಹಾಳಾಗುವುದೇ ಹೊರತು ಮತ್ತ್ಯಾವ ಪ್ರಯೋಜನವು ಇಲ್ಲ. ಮೌನಕ್ಕೆ ಇರುವ ಶಕ್ತಿ ಗದ್ದಲಕ್ಕೆ ಇರಲಾರದು. ಮೌನ ಶಾಂತಿ, ಸಮಾಧಾನದ ಪ್ರತೀಕ. ಆದ್ದರಿಂದ ನಾವು ನಮ್ಮ ಬದುಕಿನಲ್ಲಿ ಶಾಂತಿ, ಸಹನೆ ರೂಢಿಸಿಕೊಂಡು ಮೌನವಾಗಿ ನಮ್ಮ ಕರ್ತವ್ಯಗಳನ್ನು ಮಾಡುವುದನ್ನು ಕಲಿಯಬೇಕು ಎಂದು ಕವಿ ಈ ಪದ್ಯಭಾಗದಲ್ಲಿ ಹೇಳಿದ್ದಾರೆ.

**ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ**
**ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ**
**ಮಸಗುವಂಬುಜದಂತೆ ಧ್ಯೇಯದಾಳ್ವಿಸಕೆ**
**ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ**

## ಅಭ್ಯಾಸ ಹಾಳೆ: 05

**ಈ ಕೆಳಗೆ ನೀಡಿರುವ ಪದ್ಯಭಾಗಗಳನ್ನು ಕಂಠಪಾಠ ಮಾಡಿ ಪೂರ್ಣಗೊಳಿಸಿ.**

| | |
|---|---|
| ಏಕಾಂಗಿ ____________<br>____________ ಅಥವಾ<br>____________<br>______ ಕತ್ತಲಲ್ಲಿ ನಡೆದನು | ಕಾಡು ಕಾಡು ____________<br>____________<br>____________<br>____________ ಕಂಡಿತು |
| ಕೆಸರೊಳಿದ್ದರೂ ____________<br>____________ ಅಥವಾ<br>____________<br>____________ ಸಾರ್ಥಕತೆಗೆ | ಒಂದು ಬಾಣಕೆ ____________<br>____________<br>____________<br>____________ ಹಗಲಿರುಳು |
| ನೀರ ಕಂಡಲ್ಲಿ ____________<br>____________ ಅಥವಾ<br>____________<br>______ ಕೂಡಲಸಂಗಮದೇವ | ಮರವಿದ್ದು ____________<br>____________<br>____________<br>____________<br>____________<br>____________ ಚೆನ್ನಮಲ್ಲಿಕಾರ್ಜುನ |
| ಕಡೆಗೆ ಹಾಯವು ____________<br>____________ ಅಥವಾ<br>____________<br>____________<br>____________<br>____________ ನಮೊಯೆಂದ | ಎಂದೊಡರ್ಜುನ ____________<br>____________<br>____________<br>____________<br>____________<br>____________ ಬಿಟ್ಟ ಮಂಡೆಯಲಿ |

## ಅಭ್ಯಾಸ ಹಾಳೆ: 06

**ಅಭ್ಯಾಸಕ್ಕಾಗಿ ಒಂದು ಅಂಕದ ಹೆಚ್ಚುವರಿ ಪ್ರಶ್ನೆಗಳು**

1. ವಿಷಭರಿತ ಬಾಣದ ಪ್ರಭಾವದಿಂದ ಮರದಲ್ಲಿಯ ಯಾವ ಅಂಶಗಳು ಮಾಯವಾದವು?
2. ಗಿಳಿಯ ತತ್ತ್ವನಿಷ್ಠೆ ಯಾವುದಾಗಿತ್ತು?
3. ಸೈನ್ಯ ಬಲ ಇಲ್ಲದಿದ್ದರೆ ಏನಾಗಬಹುದು?
4. ನಮ್ಮ ದೇಶದ ಬಜೆಟ್ನಲ್ಲಿ ಹೆಚ್ಚಿನ ಭಾಗ ಯಾವುದಕ್ಕೆ ಮೀಸಲಾಗಿದೆ?
5. ಸಾಹಿತ್ಯದ ಮಹತ್ವವನ್ನು ಸಾರುವ ಗಾದೆ ಮಾತು ಯಾವುದು?
6. ಸತ್ವಯುತ ಸಾಹಿತ್ಯ ನಾಡಿನಲ್ಲಿ ಹೆಚ್ಚಿದಷ್ಟು ಏನು ಸಾಧ್ಯವಾಗುತ್ತದೆ?
7. ಪುಟ್ಟರಾಜ ಗವಾಯಿ ಅವರ ಹುಟ್ಟೂರು ಯಾವುದು?
8. ಬಾಲಕ ಪುಟ್ಟಯ್ಯ ತನ್ನ ಮಾವನ ಬಳಿ ಏನೆಂದು ಕ್ಷಮೆ ಯಾಚಿಸಿದನು?
9. ಚಂದ್ರಶೇಖರಯ್ಯನವರು ಹಾರ್ಮೋನಿಯಂನ ನುಡಿಯನ್ನು ಕೇಳಿ ಏನೆಂದು ಭಾವಿಸಿದರು?
10. ಬಾಲಕ ಪುಟ್ಟಯ್ಯ ಪಂಡಿತ ಪಂಚಾಕ್ಷರ ಗವಾಯಿಗಳ ಶಿಷ್ಯತ್ವವನ್ನು ಎಲ್ಲಿ ಸ್ವೀಕರಿಸಿದನು?
11. ಹಕ್ಕಿಗಳ ಗೂಡಿನಲ್ಲಿ ಯಾವುದರ ದಾರುಣವಿದೆ?
12. ಹಕ್ಕಿಗೂಡಿನ ಮಹತ್ವವನ್ನು ಸಾರುವ ಗಾದೆ ಯಾವುದು?
13. ಕನ್ನಡದ ಮೊದಲ ಉಪಲಬ್ಧ ನಾಟಕ ಯಾವುದು?
14. ಯೋಗಿಯ ಸಾಧನೆಗಿಂತಲೂ ಮಿಗಿಲಾದದ್ದು ಯಾವುದು?
15. ವೇದಗಳಾಡುವ ಸತ್ಯವನ್ನು ಯಾರು ಅರಿತಿರಲಿಲ್ಲ?
16. ಏಣಿ ಕವಿತೆ ಏನನ್ನು ಪ್ರತಿಪಾದಿಸುತ್ತದೆ?
17. ಅಡಿಗರು ಯಾವುದನ್ನು ಹೇಡಿತನ ಎಂದು ಹೇಳಿದ್ದಾರೆ?
18. ಅಡಿಗರ ಪ್ರಕಾರ ಮನುಷ್ಯನ ಜೀವನ ಯಾವುದಕ್ಕಾಗಿ ಬಳಲಬೇಕು?
19. ಗುಬ್ಬಿ ಸಾರಂಗಗಳು ಏಕೆ ನಗುತ್ತಿವೆ ಎಂದು ಜನಪದರು ಬಣ್ಣಿಸಿದ್ದಾರೆ?
20. ಮೂಡಲ್ ಕುಣಿಗಲ್ ಕೆರೆ ಪದ್ಯದಲ್ಲಿ ಹೊಂಬಾಳೆ ನಡುಗ್ಯಾವೆ ಎಂಬುದರ ಅರ್ಥವೇನು?
21. ಅಕ್ಕಮಹಾದೇವಿಯವರು ಹೇಳುವಂತೆ ಹಸುವಿನಲ್ಲಿ ಇರಬೇಕಾದ ಗುಣ ಯಾವುದು?
22. ಸೊನ್ನಲಿಗೆಯ ಸಿದ್ಧರಾಮ ಅವರ ವಚನಗಳ ಅಂಕಿತ ಯಾವುದು?
23. ಧನವು ಯಾವಾಗ ನಿಷ್ಫಲವಾಗುತ್ತದೆ?
24. ಉತ್ತರಕುಮಾರನ ಪ್ರಕಾರ ಧುರದಿಂದ ಓಡಿದ ಪಾಪವನ್ನು ಯಾರು ತೊಳೆಯುತ್ತಾರೆ?
25. ಕುಮಾರವ್ಯಾಸ ಭಾರತವು ಯಾವ ಷಟ್ಪದಿಯಲ್ಲಿದೆ?

## ಅಭ್ಯಾಸ ಹಾಳೆ: 07

- **ಈ ಕೆಳಗಿನ ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರಿಸಿ**

| | | |
|---|---|---|
| 1 | ಆಶ್ರಯ ಪದದ ವಿರುದ್ಧ ರೂಪ | |
| 2 | ನಾಮಪದದ ಬದಲಿಗೆಬಳಸುವ ಪದ | |
| 3 | ಹೆಗ್ಗುರಿಎಂಬುದು ಈ ಸಮಾಸಕ್ಕೆಉದಾಹರಣೆಯಾಗಿದೆ | |
| 4 | ಸಂಸ್ಕೃತ ಪದದ ತದ್ಭವ ರೂಪ | |
| 5 | ಹಾದಿಲಿ ಪದದ ಗ್ರಾಂಥಿಕ ರೂಪ | |
| 6 | ಬನದಲ್ಲಿ ಎಂಬ ಪದದಲ್ಲಿರುವ ವಿಭಕ್ತಿ | |
| 7 | ಭಾಮಿನಿ ಷಟ್ಪದಿಯಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ | |
| 8 | ಗುಡಿಗೋಪುರ ಎಂಬ ಪದವು ಈ ಪ್ರಕಾರಕ್ಕೆ ಸೇರಿದೆ | |
| 9 | ರೇವು ಪದದ ಅರ್ಥ | |
| 10 | ದುಡ್ಡೇದೊಡ್ಡಪ್ಪ ; ವಿದ್ಯೆ ಅದರಪ್ಪ–ಇಲ್ಲಿ ಬಳಸಲಾಗಿರುವ ಲೇಖನ ಚಿಹ್ನೆ | |
| 11 | ಬಿದ್ದರು ಎಂಬ ಕ್ರಿಯಾಪದದಲ್ಲಿರುವ ಧಾತು | |
| 12 | ಪರಹಿತಾಕಾಂಕ್ಷಿ ಎಂಬ ಪದವು ಈ ಸಂಧಿಗೆ ಉದಾಹರಣೆಯಾಗಿದೆ. | |
| 13 | ಹಲವು ಎಂಬುದು ಈ ಪ್ರಕಾರದ ನಾಮವಾಚಕಕ್ಕೆ ಉದಾಹರಣೆಯಾಗಿದೆ. | |
| 14 | ತುತ್ತತುದಿ ಎಂಬ ಪದವು ಈ ಪ್ರಕಾರಕ್ಕೆ ಉದಾಹರಣೆಯಾಗಿದೆ | |
| 15 | ನಾಮಪದದ ಮೂಲರೂಪವನ್ನು ಹೀಗೆನ್ನುವರು | |
| 16 | ನಾನು, ನಾವು ಎಂಬುವು ಈ ಪ್ರಕಾರದ ಸರ್ವನಾಮವಾಗಿವೆ. | |
| 17 | ವರ್ತಮಾನಕಾಲದ ಕಾಲಸೂಚಕ ಪ್ರತ್ಯಯ | |
| 18 | ಕೋಟಿ+ಅಂತರ–ಇದನ್ನು ಕೂಡಿಸಿ ಬರೆದಾಗ ಆಗುವ ರೂಪ | |
| 19 | ತಿಂದನು ಪದದ ಭವಿಷ್ಯತ್‌ಕಾಲದ ರೂಪ | |
| 20 | ಪೂಜಾರಿ ಎಂಬುದು ಈ ಪ್ರಕಾರದ ನಾಮವಾಗಿದೆ. | |
| 21 | ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘ ಸ್ವರಗಳ ಸಂಖ್ಯೆ | |
| 22 | ತುದಿನಾಲಗೆ ಎಂಬ ಸಮಾಸ ಪದವನ್ನು ವಿಗ್ರಹ ವಾಕ್ಯ ಮಾಡಿದಾಗ ಆಗುವ ರೂಪ | |
| 23 | ಅನುವರ ಪದದ ಅರ್ಥ | |
| 24 | ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳನ್ನು ಹೀಗೆನ್ನುವರು. | |
| 25 | ಆಶಾವಾದಿ ಪದದ ವಿರುದ್ಧರೂಪ | |
| 26 | ಉಂಟು, ಇಲ್ಲ– ಇವು ಈ ಪ್ರಕಾರದ ಅವ್ಯಯಗಳಾಗಿವೆ | |
| 27 | ನಾಲ್ಕೆಂಟಡಿ– ಈ ಪದದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ | |
| 28 | ನಾಳೆ ಮಳೆಯು ಬಂದೀತು–ಇದರಲ್ಲಿ ಬಳಕೆಯಾಗಿರುವ ಕ್ರಿಯಾಪದದ ರೂಪ | |
| 29 | ಬೇಡನು ವಿಷಭರಿತ ಬಾಣಗಳಿಂದ ಪ್ರಾಣಿಗಳನ್ನು ಕೊಲ್ಲುತ್ತಿದ್ದನು.<br>ಈ ಮೇಲಿನ ವಾಕ್ಯದಲ್ಲಿ ಕರ್ಮ ಪದ | |
| 30 | ಕ್ರಿಯಾಪದದ ಮೂಲ ರೂಪವನ್ನು ಹೀಗೆನ್ನುವರು | |